https://www.kuvempuonline.com



**ಎರಡನೆ ಸೆಮಿಸ್ಟರ್ ಬಿ.ಎ/ಬಿ.ಎಸ್ಸಿ/ಬಿ.ಕಾಂ/ಬಿ.ಎಸ್.ಡಬ್ಲ್ಯೂ ಪದವಿ ಪರೀಕ್ಷೆ**

**ಏಪ್ರಿಲ್/ಮೇ 2019**

**ಕನ್ನಡ ಭಾಷಾ ಪತ್ರಿಕೆ – ೨**

*(೨೦೧೮ – ೧೯ ನೇ ಸಾಲಿನ ವಿದ್ಯಾರ್ಥಿಗಳಿಗೆ) (ಹೊಸಬಂಗೆ)*

**SAB/SSB/SHC/SCB/SWB – 010: ಭಾಷಾ ಬೆಡಗು – ೨**

*ಸಮಯ: 3 ಗಂಟೆಗಳು]* *[ಗರಿಷ್ಠ ಅಂಕಗಳು: 80*

**1.** *ಅ. ಒಂದು ಪದ್ಯದ ಭಾವ ಸ್ವಾರಸ್ಯವನ್ನು ಸಂದರ್ಭದೊಡನೆ ವಿವರಿಸಿ:* 1 x 5 = 05

೧. ತನುಜಾನುಜರ ವಿಯೋಗದ
ಮನಃಕ್ಷತಂ ನೋಯಿಸಲ್ಕೆನೆಱೆಯವು ಸಮರಾ
ವನಿಯೊಳುಡಿದಿರ್ದ ಕಯ್ದುಗ
ಳಿನಿಸುಂ ನೋಯಿಕಮೆ ವಜ್ರಮನನಪ್ಪೆನ್ನಂ

೨. ಕುಸಿದು ಕುಳಿತನು ಕುರ್ಚಿಯಲಿ ಚಿಂತಾಕ್ರಾಂತ
ಗಡಿಯಾರಗಳ ದನಿಗೆ ಕಿವಿಯ ಮುಚ್ಚಿ,
ಮನೆಯೊಳಗಿನಿಂದ ಪುಟ್ಟ ಮೊಮ್ಮಗು ಬಂತು
ಸಕ್ಕರೆಯ ತೊದಲಿಂದ 'ಅಜ್ಜ' ಎಂದಿತು ಒಮ್ಮೆ
ಮುಂಬೆಳಗಿನೆಳೆಬಿಸಿಲು ಸಂಜೆಬಾನಿಗೆ ಬಿತ್ತು !

*ಆ. ಹತ್ತು ಪದಗಳಿಗೆ ಅರ್ಥ ಬರೆಯಿರಿ:* 10 x ½ = 05

ಝುಂಕಿಸು, ವಿಧಾತ್ರ, ಇಭ, ಬಾಡ, ಕಂಗಳತೋಹಿ, ಸೂಲಂಗಿ, ಹೂತ, ಕೌಂಗು, ರಿಕ್ತತೆ, ಕ್ರತು, ವಾಡೆ, ಶುಕ, ಕೈದು, ಅನಲ, ಸಂಪದ.

*ಇ. ಮೂರನ್ನು ಕುರಿತು ಟಿಪ್ಪಣಿ ಬರೆಯಿರಿ:* 3 x 3 = 09

೧. ಕಲಿಯುಗದಲ್ಲಿ ಗುರು–ಶಿಷ್ಯರ ಸಂಬಂಧ

೨. ಸುವ್ವಿ ಹಕ್ಕಿ

೩. ಯುಗಾದಿ

೪. ಬಳೆಗಾರ ಚೆನ್ನಯ್ಯ

೫. ಜಲಮೂಲಗಳ ರಕ್ಷಣೆ

**2.** *ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:*

ಅ) ದುರ್ಯೋಧನ 'ನೆಲಕ್ಕಾಗಿ ಕಾದಾಡಿದವನಲ್ಲ, ಛಲಕ್ಕಾಗಿ ಕಾದಾಡಿದವನು' ಈ ಹೇಳಿಕೆಯನ್ನು ಚರ್ಚಿಸಿ.

**ಅಥವಾ**

ಸಂಪ್ರದಾಯ ಮತ್ತು ಆಧುನಿಕತೆಗಳ ನಡುವಿನ ವೈರುಧ್ಯ ಭಾವ ನಿಸಾರ್‌ರವರ ಕವಿತೆಯಲ್ಲಿ ಹೇಗೆ ವ್ಯಕ್ತಗೊಂಡಿದೆ? 1 x 8 = 08

*ಮುಂದುವರೆದಿದೆ............2*

https://www.kuvempuonline.com

https://www.kuvempuonline.com

https://www.kuvempuonline.com

https://www.kuvempuonline.com



ಆ) ಚೋಮನ ಭೂಮಿಯ ಒಡೆತನದ ಹಂಬಲ ಸಾಕಾರವಾಯಿತೆ? ಚರ್ಚಿಸಿ.

ಅಥವಾ

ನಿಸರ್ಗದ ಎದುರು ಮಾನವ ಎಂದಿಗೂ ಅಲ್ಪ ಎಂಬ ವಾಸ್ತವತೆ 'ಪ್ರಳಯದ ಪ್ರಗಾಥ' ಕವಿತೆಯಲ್ಲಿ ಹೇಗೆ ಚಿತ್ರಣಗೊಂಡಿದೆ? 1 x 8 = 08

3. *ಮೂರು ಪ್ರಶ್ನೆಗಳಿಗೆ ಉತ್ತರಿಸಿ:* 3 x 5 = 15

೧. 'ತಲೆಮಾರು' ಕವಿತೆಯಲ್ಲಿ ವ್ಯಕ್ತಗೊಂಡ ಕಾಲದ ಸ್ವರೂಪವೇನು?

೨. ಕಾಲವನ್ನು ಹಕ್ಕಿಯ ರೂಪಕದಲ್ಲಿ ಹಿಡಿದಿಟ್ಟಿರುವುದನ್ನು ವಿಮರ್ಶಿಸಿ.

೩. 'ಬಳೆಗಳ ಸೇಲ್ಸ್‌ಮನ್' ಕವಿತೆಯ ಆಶಯವನ್ನು ಚರ್ಚಿಸಿ.

೪. 'ಕುಮಾರವ್ಯಾಸನ ವೃಕ್ಷ ಪ್ರತಿಮೆ' ಭಾಗದ ವೈಶಿಷ್ಟ್ಯತೆ ಏನು?

೫. ಪಕ್ಷಿಗಳ ಸಂಗೀತ ಲೋಕದ ಬಗ್ಗೆ ಲೇಖಕರ ಅಭಿಪ್ರಾಯವೇನು?

೬. ನೆಲ – ಜಲ ಕುರಿತಾದ ಕಾಳಜಿ 'ಬದಲಾಗುತ್ತಿರುವ ಭೂಮಿಯ ಪರಿಕಲ್ಪನೆ'ಯಲ್ಲಿ ವ್ಯಕ್ತಗೊಂಡ ಬಗೆಯನ್ನು ವಿವರಿಸಿ.

4. *ಅ) ಮೂರು ಪ್ರಶ್ನೆಗಳಿಗೆ ಉತ್ತರಿಸಿ:* 3 x 7 = 21

೧. ಪೌರ ಕಾರ್ಮಿಕರ ಬದುಕಿನ ವೇದನೆ ಮತ್ತು ಅವರ ಜೀವನೋತ್ಸಾಹವು 'ಬಚ್ಚೇಸು' ಕಥೆಯಲ್ಲಿ ಹೇಗೆ ಚಿತ್ರಣಗೊಂಡಿದೆ?

೨. ಹಮೀದೆಯ ಬದುಕಿನ ತೊಳಲಾಟವನ್ನು ಕುರಿತು ಬರೆಯಿರಿ.

೩. ಕೃಷ್ಣಸ್ವಾಮಿಯ ಉದಾರ ಮಾನವೀಯತೆಯ ಗುಣ 'ಉಲ್ಲಂಘನೆ' ಕಥೆಯಲ್ಲಿ ಹೇಗೆ ಚಿತ್ರಣಗೊಂಡಿದೆ?

೪. ಗಣಪೆ ಬಳ್ಳಿ ಮತ್ತು ಮಾನವ ಸಂಬಂಧಗಳ ಸೂಕ್ಷ್ಮತೆಯು 'ಕಾಡು ಬಳ್ಳಿ' ಯಲ್ಲಿ ಚಿತ್ರಣಗೊಂಡ ಬಗೆಯನ್ನು ವಿವರಿಸಿ.

೫. ಎಂ.ಕೆ.ಇಂದಿರಾರವರ 'ಹರಿಕಥೆ'ಯ ಆಶಯವನ್ನು ಚರ್ಚಿಸಿ.

*ಆ) ಮೂರು ವಿಷಯಗಳಿಗೆ ಟಿಪ್ಪಣಿ ಬರೆಯಿರಿ:* 3 x 3 = 09

೧. ಸುಧಾಮೆ

೨. ಮುತ್ತು ಬೋಳುವಿನ ಕಥೆ

೩. ಬಚ್ಚೇಸು ಕಥೆಯಲ್ಲಿನ ಕಾಂಟ್ರಾಕ್ಟರುಗಳ ಶೋಷಣೆ

೪. ಉಲ್ಲಂಘನೆಯಲ್ಲಿನ ಹೋರಾಟಗಾರರು

೫. ಹರಿಕಥೆಯಲ್ಲಿ ಮೋಹಿನಿ ಪಾತ್ರ

* * * * * * *

https://www.kuvempuonline.com

https://www.kuvempuonline.com

https://www.kuvempuonline.com